# ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ

ವಿಶೇಷ ಪ್ರಕರಣ ಸಂ. 123/2019

ಎ.ಸಿ.ಬಿ ಪೋಲೀಸ ಠಾಣೆ, ಯಾದಗಿರಿ. ......ಪಿರ್ಯಾದಿ

ವಿರುದ್ಧ

ಅಬುಬಕರ ........ಆರೋಪಿ

<u>ದೋಷಾರೋಪಣೆ</u>

ನಾನು ಶ್ರೀ.ಶಿವನಗೌಡ ಬಿಕಾಂ.,ಎಲ್‌ಎಲ್.ಬಿ(ಸ್ಪೆಷಲ್), ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಯಾದಗಿರಿ, ಆರೋಪಿತರಾದಃ

ಅಬುಬಕರ ತಂದೆ ಅಬ್ದುಲ್ ರಜಾಕ್
ವಯಾಃ 32 ವರ್ಷ ಉಃ ಗ್ರಾಮ ಲೆಕ್ಕಾಧಿಕಾರಿ ಯಾಳಗಿ ಪ್ರಭಾರ ಕೆಂಭಾವಿ
ವಾಸಃ ಮನೆ ಸಂಃ ಸಿ-3, ಎಸ್‌ಬಿಸಿ ಕ್ಯಾಂಪ್
ತಾಃ ಸುರಪೂರ ಜಿಃ ಯಾದಗಿರಿ.

ನಿನ್ನನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರುಪಡಿಸುತ್ತೇನೆ.

ಮೇಲೆ ಹೆಸರಿಸಿದ ಆರೋಪಿತರಾದ ನೀನು ಕಲಂ 2(ಸಿ) ಲಂಚ ಪ್ರತಿಬಂಧ ಕಾಯ್ದೆ 1988ರ ಪ್ರಕಾರ ಸರಕಾರಿ ನೌಕರರಾಗಿದ್ದು, ಆರೋಪಿ ಅಬುಬಕರ ನೀನು ಗ್ರಾಮ ಲೆಕ್ಕಾಧಿಕಾರಿ ಅಂತ ಕೆಲಸ ಮಾಡುತ್ತಿದ್ದು, ಕೆಂಭಾವಿ ಸಿಮಾಂತರದಲ್ಲಿ ಫಿರ್ಯಾದಿ ಮಲ್ಲಿಕಾರ್ಜುನ ತಂದೆ ಶರಣಪ್ಪ ಪೂಜಾರಿ ಇತನ ಹಿರಿಯರ ಹೆಸರಿನಲ್ಲಿದ್ದ ಹೊಲ ಸರ್ವೆ ನಂ. 602/2, 04 ಎಕರೆ 18 ಗುಂಟೆ ಜಮೀನನ್ನು ಸಿವಿಲ್ ಜಡ್ಜ ಸುರಪೂರ ಕೋರ್ಟನ ಓ.ಎಸ್ ಸಂಃ 257/2015 ಕಾಂಪ್ರಮೈಸ್ ಡಿಕ್ರಿ ಮೂಲಕ ದಿಃ 22.01.2016 ರಂದು ತನ್ನ ಹೆಸರಿಗೆ ಆಗಿದ್ದು, ಸದರಿ ಡಿಕ್ರಿ ಪ್ರಕಾರ ತನ್ನ ಹೆಸರನ್ನು ಪಹಣಿಯಲ್ಲಿ ಸೇರಿಸುವ ಸಲುವಾಗಿ ಆರೋಪಿ ಅಬುಬಕರ ನೀನು ಲಂಚವಾಗಿ ರೂ.12,000-00 ಹಣದ ಬೇಡಿಕೆ ಇಟ್ಟು ಕೊಡಲು ಒತ್ತಾಯಿಸಿ ತನ್ಮೂಲಕ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಕಲಂ.7 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ದಿನಾಂಕಃ 25-05-2018 ಮಧ್ಯಾಹ್ನ 3-00 ಗಂಟೆ ಸುಮಾರಿಗೆ ಕೆಂಭಾವಿಯ ಶಿಫಾ ಕೊಲ್ಡ ಡ್ರಿಂಕ್ಸ್ ಅಂಗಡಿಯಲ್ಲಿ ಆರೋಪಿ ಅಬುಬಕರ ನೀನು ಲಂಚದ ಹಣ ರೂ.12,000-00 ಗಳನ್ನು ಫಿರ್ಯಾದಿಯಿಂದ ಪಡೆದುಕೊಳ್ಳುವಾಗ ಲೋಕಾಯುಕ್ತ ಪೋಲಿಸರಿಗೆ ಸಿಕ್ಕುಬಿದ್ದು ತನ್ಮೂಲಕ ಲಂಚ ಪ್ರತಿಬಂಧಕ ಕಾಯ್ದೆ ಕಲಂ.13(1)(d) ಸಹವಾಚಕ 13(2) ರಡಿಯಲ್ಲಿ ದಂಡನೀಯವಾದ ಅಪರಾದಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿದಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 14-01-2020 ರಂದು ಆದೇಶಿಸಿದ್ದೇನೆ.

ಸ್ಥಳ ಃ ಯಾದಗಿರಿ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ

# ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ

ವಿಶೇಷ ಪ್ರಕರಣ ಸಂ. 123/2019

ಎ.ಸಿ.ಬಿ ಪೋಲೀಸ ಠಾಣೆ, ಯಾದಗಿರಿ. ......ಪಿರ್ಯಾದಿ

ವಿರುದ್ಧ

ಅಬುಬಕರ ........ಆರೋಪಿ

ಅಬುಬಕರ ತಂದೆ ಅಬ್ದುಲ್ ರಜಾಕ್
ವಯಾಃ 32 ವರ್ಷ ಉಃ ಗ್ರಾಮ ಲೆಕ್ಕಾಧಿಕಾರಿ ಯಾಳಗಿ ಪ್ರಭಾರ ಕೆಂಭಾಛಿ
ವಾಸಃ ಮನೆ ಸಂಃ ಸಿ-3, ಎಸ್‌ಬಿಸಿ ಕ್ಯಾಂಪ್
ತಾಃ ಸುರಪೂರ ಜಿಃ ಯಾದಗಿರಿ.

<u>ಆರೋಪಿಯ ಹೇಳಿಕೆ</u>

ಪ್ರಶ್ನೆಃ-1 ಆರೋಪಣಾ ಪಟ್ಟಿ ಮಾಡಿದ್ದನ್ನು ನೀವು ಕೇಳಿದ್ದಿರಾ ?

ಉತ್ತರಃ

ಪ್ರಶ್ನೆಃ-2 ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ಪ್ರಕರಣ ನಡೆಸುವಿರಾ?

ಉತ್ತರಃ-

ಮೇಲೆ ಹೇಳಿದ ಆಪಾದನೆಗಳನ್ನು ನನ್ನ ಮುಂದೆ ದಾಖಲಿಸಿಕೊಂಡಿದ್ದು ಅದು ಪೂರ್ತಿಯಾಗಿ ಸರಿಯಾಗಿದ್ದು ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಂಡು ಪ್ರಮಾಣಿಕರಿಸಲಾಯಿತು.

ಸ್ಥಳ : ಯಾದಗಿರಿ
ದಿನಾಂಕಃ 14.01.2020

ಜಿಲ್ಲಾ ಮತ್ತು ವಿಶೇಷ ನ್ಯಾಯಾಧೀಶರು,
ಯಾದಗಿರಿ.